ಶ್ರೀ ಆನಂತ್ ನಾಗ್ :- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದ ಶ್ರೀಮಾನ್ ನಂಜೇಗೌಡರು ಕೊಟ್ಟಿರುವ ಸಲಹೆಯಂತೆ ಕೆಲಸ ಹಮ್ಮಿಕೊಳ್ಳುತ್ತೇವೆ. ಅಲ್ಲಿ ತಕ್ಷಣ ಕಾರ್ಯಕ್ರಮ ಹಮ್ಮಿಕೊಳ್ಳಲು ಹಣಕಾಸಿನ ತೊಂದರೆಯಿರುವುದಲ್ಲದೆ ಕೆಂಪಾಂಬುದಿ ಕೆರೆಯ ಸುತ್ತಮುತ್ತಲಿರುವ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವವರನ್ನು ಬೇರೆಡೆಗೆ ಸ್ಥಳಾಂತರಿಸಬೇಕಾಗಿರುವುದರಿಂದ ಈಗಾಗಲೇ ಅದನ್ನು ಉದ್ಯಾನವನವನ್ನಾಗಿ ಮಾರ್ಪಡಿಸ ಬೇಕೆಂಬ ಉದ್ದೇಶವಿದ್ದು, ಈ ವಿಚಾರವಾಗಿ ನಾನು ಸಂಬಂಧಿಸಿದವರೊಂದಿಗೆ ವೈಯಕ್ತಿಕವಾಗಿ ಚರ್ಚಿಸಿದ್ದು ಆದಷ್ಟು ಬೇಗ ಯೋಜನೆ ಜಾರಿಗೆ ತರುತ್ತೇವೆ.

ವಿಷಯ :- ಚಿಕ್ಕನಾಯಕನಹಳ್ಳಿ ಕ್ಷೇತ್ರದಲ್ಲಿ ಹಸಿರು ಕಾರ್ಡ್ ಪಡೆದವರ ಸಂಖ್ಯೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 247 (1640)

ಶ್ರೀ ಎನ್. ಬಸವಯ್ಯ (ಚಿಕ್ಕನಾಯಕನಹಳ್ಳಿ) :- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿ ಚುನಾವಣೆ ಕ್ಷೇತ್ರದಲ್ಲಿ ಹಸಿರುಕಾರ್ಡು ಪಡೆದಿರುವ ಜನಸಂಖ್ಯೆ ಎಷ್ಟು ?

ಆ) ಇದರಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ ಜನರ ಸಂಖ್ಯೆ ಎಷ್ಟು?

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :-

ಅ) ತ್ರಿವರ್ಣ ಪಡಿತರ ಚೀಟಿಗಳನ್ನು ಹಸಿರು ಪಡಿತರ ಚೀಟಿಗಳಿಗಾಗಿ ಬದಲಾಯಿಸಿರುವುದು 19,657

ಹಸಿರು ಕಾರ್ಡು ನೀಡಿದ ಹೊಸ ಫಲಾನುಭವಿಗಳ ಸಂಖ್ಯೆ 7,261

ಹಸಿರು ಕಾರ್ಡು ಇನ್ನೂ ನೀಡಬೇಕಾದ ಹೊಸ ಫಲಾನುಭವಿಗಳ ಸಂಖ್ಯೆ 195

ಒಟ್ಟು 27,113

ಆ) ಪರಿಶಿಷ್ಟ ಜಾತಿ 5302

ಪರಿಶಿಷ್ಟ ಪಂಗಡ 2592

ಶ್ರೀ ಎನ್. ಬಸವಯ್ಯ :– ಮಾನ್ಯ ಅಧ್ಯಕ್ಷರೆ, ಚಿಕ್ಕನಾಯಕನಹಳ್ಳಿ ಕ್ಷೇತ್ರದಲ್ಲಿ ಹಸಿರು ಕಾರ್ಡು ಪಡೆದಿರುವ ಜನರ ಸಂಖ್ಯೆಯೆಷ್ಟು ಎಂಬುದಕ್ಕೆ 27,113 ಎಂದು ಉತ್ತರ ನೀಡಿದ್ದಾರೆ. ಹಾಗಿದ್ದರೆ ಫಲಾನುಭವಿಗಳೆಲ್ಲರಿಗೂ ಹಸಿರು ಕಾರ್ಡು ಲಭ್ಯವಾಗಿದೆಯೇ? ಒಂದು ವೇಳೆ ಹಸಿರು ಕಾರ್ಡುಗಳನ್ನು ಫಲಾನುಭವಿಗಳಿಗೆ ಕೊಡದಿದ್ದರೆ ಅದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ಬಸವಣ್ಣಪ್ಪ :– ಮಾನ್ಯ ಅಧ್ಯಕ್ಷರೆ, ಫಲಾನುಭವಿಗಳೆಲ್ಲರಿಗೂ ಹಸಿರು ಕಾರ್ಡು ವಿತರಣೆಯಾಗಿರುವುದು ನನ್ನ ಗಮನಕ್ಕೆ ಬಂದಿದೆ. ಕೆಲವು ಕಾರಣಗಳಿಂದಾಗಿ ಹಸಿರು ಕಾರ್ಡು ಕೊಟ್ಟಿರುವುದನ್ನು ರಿಜೆಕ್ಟ್ ಮಾಡಿದ್ದೇವೆ. ಅದರ ಬಗ್ಗೆ ಪರಿಶೀಲನೆ ಮಾಡಿ ಅವರಿಗೂ ಹಸಿರು ಕಾರ್ಡು ಕೊಡುವ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎನ್ ಬಸವಯ್ಯ :– ನಮ್ಮಲ್ಲಿ ಆರುನೂರು ಮಂದಿಗೆ ಹಸಿರು ಕಾರ್ಡು ಕೊಡಬೇಕಾಗಿದೆ. ಅವರುಗಳು ಹಸಿರು ಕಾರ್ಡನ್ನು ಪಡೆಯಲು ಬದ್ಧರಾಗಿದ್ದಾರೆ. ಇದರ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಯೇ?

ಶ್ರೀ ಜಿ. ಬಸವಣ್ಣಪ್ಪ :– ಮಾನ್ಯ ಸದಸ್ಯರು ಹೇಳಿರುವ ಬಗ್ಗೆ ವಿಚಾರ ಮಾಡಿ ಆ ಆರುನೂರು ಜನರಿಗೆ ಹಸಿರುಕಾರ್ಡು ಕೊಟ್ಟಿಲ್ಲದಿದ್ದರೆ ಅವರಿಗೆ ಕೊಡುವ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಜಿ. ಎ. ಶ್ರೀರಾಮರೆಡ್ಡಿ :– ಮಾನ್ಯ ಅಧ್ಯಕ್ಷರೆ, ನಾನು ಕೇಳಬಯಸುವುದೇನೆಂದರೆ, ಈಗ ಏನು ಪಡಿತರ ಪದಾರ್ಥಗಳ ವಿತರಣಾ ಅಂಗಡಿಗಳಿವೆ ಅದರಿಂದ ನ್ಯಾಯಯುತವಾಗಿ ಪಡಿತರ ಪದಾರ್ಥಗಳು ವಿತರಣೆಯಾಗುತ್ತಿಲ್ಲ. ನೂರಕ್ಕೆ ಎಂಭತ್ತು ಭಾಗ ಪಡಿತರ ಆಹಾರ ಪದಾರ್ಥಗಳು ಅಕ್ರಮವಾಗಿ ಮಾರಾಟವಾಗುತ್ತಿದೆ. ನಮ್ಮಲ್ಲಿ ಎಷ್ಟೋ ಮಂದಿ ಪಡಿತರ ಪದಾರ್ಥಗಳನ್ನು ನೋಡಿಯೇ ಇಲ್ಲ. ಸರ್ಕಾರವೇನು ಸಾಮಾನ್ಯ ಮತ್ತು ಬಡವರಿಗೆ ಪಡಿತರ ಪದಾರ್ಥಗಳನ್ನು ಕೊಡುತ್ತದೆ ಆದರಲ್ಲಿ ಎಂಭತ್ತು ಭಾಗ ಪಡಿತರ ವಿತರಣಾ ಅಂಗಡಿಯವರು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಸಾಮಾನ್ಯ ಜನರಿಗೆ ಪಡಿತರ ಪದಾರ್ಥಗಳು ದೊರೆಯುತ್ತಿಲ್ಲ. ಇದರ ಬಗ್ಗೆ ಹಲವಾರು ಸಲ ಚರ್ಚೆಯಾಗಿದೆ. ಈ ಪಡಿತರ ಪದಾರ್ಥಗಳನ್ನು ವಿತರಣೆ ಮಾಡಲು ಖಾಸಗಿಯವರಿಗೆ ವಹಿಸುವುದರ ಬದಲಾಗಿ ಸಹಕಾರಿ ಸಂಸ್ಥೆಗಳಿಗೆ, ಉದಾಹರಣೆಗೆ ಹಾಲು ಉತ್ಪಾದಕರ ಸಂಘ, ಯುವಕರ ಸಂಘ, ರೇಷ್ಮೆ ಸಹಕಾರ ಸಂಘ ಈ ರೀತಿಯಾಗಿ ಸೊಸೈಟಿಗಳಿಗೆ ವಹಿಸಲು ಆಗುವುದಿಲ್ಲವೇ? ಆ ರೀತಿ ಸಹಕಾರ ಸಂಘಗಳಿಗೆ, ಸೊಸೈಟಿಗಳಿಗೆ ಪಡಿತರ ಪದಾರ್ಥಗಳನ್ನು ವಿತರಣೆ ಮಾಡಲು ನೇಮಿಸಿದ್ದೇ ಆದರೆ ಪರಿಣಾಮಕಾರಿಯಾಗಿ ವಿತರಣೆ ಮಾಡಲು ಸಾಧ್ಯವಾಗುತ್ತದೆ. ಆದ್ದರಿಂದ ಅಂಥ ಸಹಕಾರ ಸಂಘಗಳಿಗೆ, ಸೊಸೈಟಿಗಳಿಗೆ ಪಡಿತರ ಪದಾರ್ಥಗಳನ್ನು ವಿತರಣೆ ಮಾಡಲು ವಹಿಸುವ ಬಗ್ಗೆ ಸರ್ಕಾರ ಸ್ಪಷ್ಟವಾಗಿ ನಿಲುವನ್ನು ತಾಳಬೇಕು, ಮಾನ್ಯ ಸಚಿವರು ಇದರ ಬಗ್ಗೆ

ಅಗತ್ಯ ಮತ್ತು ತೀವ್ರ ಕ್ರಮವನ್ನು ತೆಗೆದುಕೊಳ್ಳಬೇಕು. ಮತ್ತು ಸರ್ಕಾರ ಈ ದಿಕ್ಕಿನ ಬಗ್ಗೆ ಏನು ಆಲೋಚನೆ ಮಾಡಿದೆ ಎಂಬ ಬಗ್ಗೆ ಸ್ಪಷ್ಟಪಡಿಸಬೇಕು. ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಸ್ಥಳೀಯ ಅಧಿಕಾರಿಗಳು ಮತ್ತು ಖಾಸಗಿ ಪಡಿತರ ವಿತರಣಕಾರರು ಒಬ್ಬರಿಗೊಬ್ಬರು ಶಾಮೀಲಾಗಿದ್ದಾರೆ. ಆದರಿಂದಾಗಿ ಖಾಸಗಿ ವಿತರಣ ಕಾರರ ಮೇಲೆ ಕ್ರಮವನ್ನು ತೆಗೆದುಕೊಳ್ಳಲು ಆಗುತ್ತಿಲ್ಲ. ಶಾಸಕರಾಗಲಿ ಮತ್ತೊಬ್ಬರಾಗಲಿ ಇದರ ಬಗ್ಗೆ ದೂರು ಕೊಟ್ಟರೆ ಅವರು ಒಂದು ರೀತಿ ನೋಟೀಸ್ ಕೊಡುತ್ತಾರೆ. ಆದರ ಆಧಾರದ ಮೇಲೆ ವಿತರಣಕಾರರು ಹೈ ಕೋರ್ಟ್‌ನಿಂದ ಸ್ಟೇಯನ್ನು ತಂದು ಬಿಡುತ್ತಾರೆ. ಈ ರೀತಿ ಸ್ಟೇ ತಂದಿರುವ ಬಗ್ಗೆ ಮಾನ್ಯ ಸಚಿವರಿಗೆ, ಜಿಲ್ಲಾಧಿಕಾರಿಗಳ ಗಮನಕ್ಕೆ ಮಾಹಿತಿ ಬಂದಿದೆ. ಆದರೆ ಯಾರು ಅವ್ಯವಹಾರ ಮಾಡಿರುತ್ತಾರೆ ಅಥವಾ ವಿತರಣ ಕಾರರಿಗೆ ನೋಟೀಸ್ ಕೊಡುವ ಅವಶ್ಯಕತೆ ಇಲ್ಲ. ತಕ್ಷಣವೇ ಅವರ ಪರವಾನಿಗೆಯನ್ನು ರದ್ದು ಮಾಡಬೇಕು. ಮತ್ತು ಪಡಿತರದಾರರನ್ನು ರಕ್ಷಣೆ ಮಾಡಬೇಕು. ಆದರೆ ಸರ್ಕಾರ ಇದರ ಬಗ್ಗೆ ಯಾವುದೇ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತಿಲ್ಲ. ಕೋರ್ಟ್‌ನಿಂದ ಸ್ಟೇಯನ್ನು ಪಡೆದುಕೊಂಡಿರುವಾಗ ನಮ್ಮ ಸರ್ಕಾರಿ ವಕೀಲರು ಕೋರ್ಟ್‌ನಲ್ಲಿ ಸರಿಯಾಗಿ ವಾದ ಮಾಡುವುದಿಲ್ಲ. ಕೋರ್ಟ್‌ನಿಂದ ಸ್ಟೇಯನ್ನು ಪಡೆದುಕೊಂಡೇ ಪಡಿತರ ಅಂಗ ಡಿಯನ್ನು ಅವರು ನಡೆಸುತ್ತಿರುತ್ತಾರೆ. ಸರ್ಕಾರಿ ವಕೀಲರು ಸ್ಟೇ ವೆಕೇಟ್ ಮಾಡಿಸಲು ವಾದ ಮಾಡಲು ಮುಂದೆ ಬರುವುದಿಲ್ಲ. ಆದ್ದರಿಂದ ಇಷ್ಟೆಲ್ಲಾ ಸಮಸ್ಯೆ ಇರುವುದರಿಂದ ಇದನ್ನು ಸಂಪೂರ್ಣವಾಗಿ, ಪರಿಣಾಮಕಾರಿಯಾಗಿ ಪಡಿತರ ಪದಾರ್ಥಗಳನ್ನು ವಿತರಣೆ ಮಾಡುವ ಉದ್ದೇಶದಿಂದ ಸರ್ಕಾರ ಏನು ಯೋಚನೆ ಮಾಡಿದೆ ಎಂಬ ಬಗ್ಗೆ ಹೇಳಬೇಕು. ಇಲ್ಲದಿದ್ದರೆ ಅವ್ಯವಸ್ಥೆಯ ಆಗರವಾಗಿರುವ ಈ ಪಡಿತರ ಪದಾರ್ಥಗಳ ವಿತರಣಾ ವ್ಯವಸ್ಥೆಯನ್ನು ನಿಲ್ಲಿಸಲು ಆಗುವುದಿಲ್ಲ. ಸರ್ಕಾರ ಅನ್ಯಾಯ ಮಾಡಿದಂತಾಗುತ್ತದೆ. ಪಡಿತರ ಪದಾರ್ಥಗಳ ಸರಿಯಾದ ವಿತರಣೆಗೆ ಸರ್ಕಾರ ಬದ್ಧವಾಗಿರಬೇಕು. ಆ ನಿಟ್ಟಿನಲ್ಲಿ ಸರ್ಕಾರದ ಕ್ರಮವೇನು?

ಶ್ರೀ ಜಿ. ಬಸವಣ್ಣಪ್ಪ :- ಮಾನ್ಯ ಅಧ್ಯಕ್ಷರೆ, ನ್ಯಾಯ ಬೆಲೆ ಅಂಗಡಿಯ ಮೂಲಕ ಪಡಿತರ ಪದಾರ್ಥಗಳ ವಿತರಣೆ ಮಾಡುವ ಬಗ್ಗೆ ರೂಟ್ ಮ್ಯಾಪ್ ಇದ್ದು ಅದರ ಪ್ರಕಾರ ಡೋರ್ ಡಿಲಿವರಿ ಮೂಲಕ ವಿತರಣೆ ಮಾಡುವ ಪದ್ಧತಿ ಸಧ್ಯದಲ್ಲಿ ಜಾರಿಯಲ್ಲಿದೆ. ಕೆಲವು ನ್ಯೂನತೆಗಳಿಂದಾಗಿ ರೂಟ್ ಮ್ಯಾಪ್ ಪ್ರಕಾರ ಪಡಿತರ ಪದಾರ್ಥಗಳು ವಿತರಣೆಯಾಗುತ್ತಿಲ್ಲ. ರಸ್ತೆಯ ಮಧ್ಯದಲ್ಲಿಯೇ ಹೋಟೆಲ್‌ನವರು ಮತ್ತು ಇನ್ನಿತರೆ ಸಂಸ್ಥೆಯವರು ಪಡಿತರ ಪದಾರ್ಥಗಳನ್ನು ಅವ್ಯವಹಾರಿಕವಾಗಿ ಪಡೆದುಕೊಳ್ಳು ತ್ತಿರುವುದು ಕಂಡುಬಂದಿದೆ. ಆದ್ದರಿಂದ ರೂಟ್ ಮ್ಯಾಪ್‌ನ ಪ್ರಕಾರವೇ ಪಡಿತರ ಪದಾರ್ಥಗಳನ್ನು ವಿತರಣೆ ಮಾಡುವುದನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಕ್ರಮ ತೆಗೆದುಕೊಳ್ಳುತ್ತೇನೆ. ಮತ್ತು ಅವ್ಯವಹಾರ ಮಾಡತಕ್ಕ ನ್ಯಾಯಬೆಲೆ ಅಂಗಡಿಗಳ ಪರ ವಾನಗಿಯನ್ನು ರದ್ದು ಮಾಡಬೇಕೆಂದು ಹೇಳಿದ್ದಾರೆ. ಈಗಾಗಲೇ ಐವತ್ತು ನ್ಯಾಯಬೆಲೆ ಅಂಗಡಿಗಳ ಪರವಾನಗಿಯನ್ನು ರದ್ದು ಮಾಡಿದ್ದೇವೆ. ಅವರುಗಳು ಕೋರ್ಟ್‌ನಿಂದ ತಾವು

ಹೇಳಿದಂತೆ ತಡೆಯಾಜ್ಞೆಯನ್ನು ತಂದಿರುತ್ತಾರೆ. ಸರ್ಕಾರದ ವತಿಯಿಂದ ಅಡ್ವೊಕೇಟ್ ಜನರಲ್‌ರವರಿಗೆ ಆದಷ್ಟು ಬೇಗ ಈ ತಡೆಯಾಜ್ಞೆಯನ್ನು ತೆರವು ಮಾಡಿಸಲು ಕೇಳಿ ಕೊಂಡಿದ್ದೇವೆ.

ಅಧ್ಯಕ್ಷರು :- ಸಹಕಾರಿ ಕ್ಷೇತ್ರದಲ್ಲಿ ಹಲವಾರು ಸಹಕಾರಿ ಸಂಘಗಳು, ಸೊಸೈಟಿ ಗಳಿವೆ. ಹಾಲು ಉತ್ಪಾದಕರ ಸಹಕಾರ ಸಂಘ, ರೇಷ್ಮೆ ಸಹಕಾರ ಸಂಘ, ಮುಂತಾದವು ಗಳಿವೆ. ಇವುಗಳ ಮೂಲಕ ತಾವು ಏಕೆ ಪಡಿತರ ಪದಾರ್ಥಗಳನ್ನು ವಿತರಣೆ ಮಾಡಲು ಕ್ರಮ ತೆಗೆದುಕೊಳ್ಳಬಾರದು? ಖಾಸಗಿಯವರ ಮೂಲಕ ವಿತರಣೆ ಮಾಡು ತ್ತಿರುವುದನ್ನೇಕೆ ತಪ್ಪಿಸಬಾರದು? ನ್ಯಾಯಬೆಲೆ ಅಂಗಡಿಯವರು ಬಹಳ ಅವ್ಯವಹಾರ ಮಾಡುತ್ತಿದ್ದಾರೆ. ಎಲ್ಲಾ ಕಡೆಗಳಲ್ಲೂ ಇದು ಇದೆ. ಅವ್ಯಹಾರದಲ್ಲಿ ತೊಡಗಿದಂಥ ನ್ಯಾಯಬೆಲೆಯ ಅಂಗಡಿಯವರು ಹೈಕೋರ್ಟ್‌ನಿಂದ ತಡೆಯಾಜ್ಞೆ ತಂದು ತಮ್ಮ ವ್ಯವಹಾರವನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ನಮ್ಮಲ್ಲಿ ಸಕ್ಕರೆ, ಸೀಮೆ ಎಣ್ಣೆಯನ್ನು ಎಷ್ಟೋ ಜನರು ಕಂಡಿಲ್ಲ. ತಡೆಯಾಜ್ಞೆಯನ್ನು ಕೊಡುವುದಕ್ಕೆ ಹೈಕೋರ್ಟ್‌ನ್ನು ನಿಂದನೆ ಮಾಡು ವುದು ಸರಿಯಲ್ಲ. ಹೈಕೋರ್ಟ್‌ನವರು ಅವರ ಕೆಲಸವನ್ನು ಮಾಡುತ್ತಾರೆ. ಆದ್ದರಿಂದ ಖಾಸಗಿ ನ್ಯಾಯಬೆಲೆ ಅಂಗಡಿಗಳ ಬದಲಾಗಿ ಸಹಕಾರಿ ಸಂಘಗಳ ಮೂಲಕವೇ ಇದನ್ನು ಏತಕ್ಕೆ ವಿತರಣೆ ಮಾಡಬಾರದು?

ಶ್ರೀ ಜಿ. ವಿ. ಶ್ರೀ ರಾಮರೆಡ್ಡಿ :- ಖಾಸಗಿ ನ್ಯಾಯಬೆಲೆ ಅಂಗಡಿಗಳನ್ನು ರದ್ದುಮಾಡಿ ಅದನ್ನು ಸಹಕಾರಿ ಸಂಘಗಳಿಗೆ, ಸೊಸೈಟಿಗಳಿಗೆ, ಸಂಸ್ಥೆಗಳಿಗೆ ಕೊಟ್ಟು ಪಡಿತರ ಪದಾರ್ಥಗಳನ್ನೇಕೆ ವಿತರಣೆ ಮಾಡಲು ಕ್ರಮ ತೆಗೆದುಕೊಳ್ಳಬಾರದು?

ಶ್ರೀ ಜಿ. ಬಸವಣ್ಣಪ್ಪ :- ಮಾನ್ಯ ಸದಸ್ಯರು ಖಾಸಗಿ ನ್ಯಾಯಬೆಲೆ ಅಂಗಡಿಗಳನ್ನು ರದ್ದು ಮಾಡುವ ಬಗ್ಗೆ ಹೇಳಿದ್ದಾರೆ. ನಮ್ಮ ಇಲಾಖೆಯಲ್ಲ ಅವ್ಯವಹಾರ ವಾಗುತ್ತಿರುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದಕ್ಕಾಗಿ ಹಲವಾರು ನ್ಯಾಯ ಬೆಲೆ ಅಂಗಡಿಗಳ ಪರವಾನಗಿಯನ್ನು ರದ್ದುಮಾಡಿದ್ದೇವೆ.

ಅಧ್ಯಕ್ಷರು :- ಖಾಸಗಿ ನ್ಯಾಯಬೆಲೆ ಅಂಗಡಿಯನ್ನು ರದ್ದು ಮಾಡಿ ಸಹಕಾರಿ ಸಂಘಗಳಿಗೆ, ಸೊಸೈಟಿಗಳಿಗೆ ವಹಿಸುವ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಜಿ. ಬಸವಣ್ಣಪ್ಪ :- ತಕ್ಷಣವೇ ಎಲ್ಲಾ ಖಾಸಗಿ ನ್ಯಾಯಬೆಲೆ ಅಂಗಡಿ ಗಳನ್ನು ರದ್ದು ಮಾಡಲು ಆಗುವುದಿಲ್ಲ. ಯಾರ್ಯಾರು ಅವ್ಯವಹಾರ ಮಾಡುತ್ತಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಹಂತ ಹಂತವಾಗಿ ಮತ್ತು ಮುಂದಿನ ದಿವಸಗಳಲ್ಲಿ ಪಡಿತರ ಪದಾರ್ಥಗಳ ವಿತರಣೆಗೆ ಸಹಕಾರಿ ಸಂಘಗಳಿಗೆ, ಸೊಸೈಟಿಗಳಿಗೆ ಕೊಡಲು ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು :- ಸರ್ಕಾರದ ನಿಲುವೇನು ಎಂಬುದು ಗೊತ್ತಾಯಿತು ಬಿಡಿ.

ಶ್ರೀ ಹೆಚ್. ಎನ್. ನಂಜೇಗೌಡ :- ಅಧ್ಯಕ್ಷರೆ, ಖಾಸಗಿಯವರಿಗೆ ನ್ಯಾಯ ಬೆಲೆ ಅಂಗಡಿಯನ್ನು ಕೊಡುವುದರಿಂದ ಅವರಿಗೆ ಹೇಳುವವರು ಕೇಳುವವರು ಯಾರೂ ಇಲ್ಲದಂತಾಗಿದೆ. ಮನಸ್ಸಿಗೆ ಬಂದಂತೆ ಅವ್ಯವಹಾರ ಮಾಡುತ್ತಿದ್ದಾರೆ. ಆದ್ದರಿಂದ ಸಹಕಾರಿ ಸಂಘಗಳೇನಿವೆ ಅದರ ಮೂಲಕ ಪಡಿತರ ಪದಾರ್ಥಗಳನ್ನು ವಿತರಣೆ ಮಾಡಲು ಸರ್ಕಾರವೇಕೆ ಕ್ರಮ ತೆಗೆದುಕೊಳ್ಳಬಾರದು? ಸಹಕಾರಿ ಸಂಘಗಳು, ಹಾಲು ಉತ್ಪಾದಕರ ಸಂಘ, ಯುವಕರ ಸಂಘಗಳೇನಿವೆ ಅವುಗಳಿಗೆ ಈ ಜವಾಬ್ದಾರಿಯನ್ನು ವಹಿಸಿದರೆ ಕೊನೆಯ ಪಕ್ಷ ಸ್ವಲ್ಪವಾದರೂ ಸುಧಾರಣೆಯಾಗುತ್ತದೆ. ಖಾಸಗಿಯವರಿಗೆ ಇದನ್ನು ಒಪ್ಪಿಸುವುದನ್ನು ನಿಲ್ಲಿಸಬೇಕು. ಅದು ಸರಿಯಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೆ, ಸಹಕಾರಿ ಕ್ಷೇತ್ರದಲ್ಲಿನ ಸೊಸೈಟಿಗಳು ಅತ್ಯಂತ ಪ್ರಾಮಾಣಿಕವಾಗಿ ಜವಾಬ್ದಾರಿಯನ್ನು ನಿರ್ವಹಿಸಲು ತಯಾರಾಗಿರುವುದು ತಮಗೆ ಗೊತ್ತಿದೆ. ಅಲ್ಲಿನ ನಿರ್ದೇಶಕರು, ಸದಸ್ಯರುಗಳು ಒಟ್ಟಿಗೆ ಸೇರಿ ಕೆಲಸ ಮಾಡುವುದರಿಂದ ಸಮರ್ಪಕವಾದ ರೀತಿಯಲ್ಲಿ ಸೇವೆಯನ್ನು ಪಡೆದುಕೊಳ್ಳ ಬಹುದು. ಆದ್ದರಿಂದ ಇದರ ಬಗ್ಗೆ ಪಾಲಿಸಿ ಡಿಸಿಷನ್ ತೆಗೆದುಕೊಳ್ಳಬೇಕು. ಖಾಸಗಿ ಯವರಿಗೆ ನ್ಯಾಯಬೆಲೆ ಅಂಗಡಿಗಳನ್ನು ಕೊಟ್ಟು ಅವರು ಮಾಡುತ್ತಿರುವ ಅವ್ಯವಹಾರಕ್ಕೆ ಮತ್ತೆ ಉತ್ತೇಜನ ನೀಡಿದಂತಾಗುತ್ತದೆ. ರಾಜಕೀಯವಾಗಿಯೋ ಮತ್ತೊಂದು ವಿಧಾನದಲ್ಲಿ ಖಾಸಗಿ ನ್ಯಾಯಬೆಲೆ ಅಂಗಡಿಯವರು ಬೆಂಬಲವನ್ನು ಪಡೆದುಕೊಂಡು ತಮ್ಮ ದಾಂದಲೆ ಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಆದ್ದರಿಂದ ಪಡಿತರ ಪದಾರ್ಥಗಳನ್ನು ಸಹಕಾರಿ ಸಂಘಗಳ ಮೂಲಕ ವಿತರಣೆ ಮಾಡಲು ಸಹಕಾರಿ ಸಂಸ್ಥೆಗಳಿಗೆ ಇದನ್ನು ವಹಿಸಿಕೊಡುವ ಬಗ್ಗೆ ಸರ್ಕಾರ ನಿರ್ಧಾರ ತೆಗೆದುಕೊಳ್ಳಬೇಕು.

ಶ್ರೀ ಜೆ. ಬಸವಣ್ಣಪ್ಪ :- ಅಧ್ಯಕ್ಷರೆ, ಒಂದೇ ಬಾರಿಗೆ ಇದನ್ನು ರದ್ದು ಮಾಡಿದರೆ ಬಳಕೆದಾರರಿಗೆ ಬಹಳ ತೊಂದರೆಯಾಗುತ್ತದೆ. ಇದರ ಬಗ್ಗೆ ದೀರ್ಘವಾಗಿ ಚಿಂತನೆ ಮಾಡಿ ಕ್ರಮ ತೆಗೆದುಕೊಳ್ಳಬೇಕು. ಒಂದೇ ರಾತ್ರಿಯಲ್ಲಿ ಈಗ ಇರತಕ್ಕ ವ್ಯವಸ್ಥೆಯನ್ನು ಬದಲಾವಣೆ ಮಾಡಲು ಸಾಧ್ಯವಾಗುವುದಿಲ್ಲ. ಬಹಳ ಕಷ್ಟವಾಗುತ್ತದೆ, ಬಳಕೆದಾರರಿಗೆ ಬಹಳ ತೊಂದರೆಯೂ ಆಗುತ್ತದೆ. ಆದರೆ ತಾವೇನು ಸಹಕಾರಿ ಸಂಘಗಳಿಗೆ ಪಡಿತರ ವ್ಯವಸ್ಥೆಯನ್ನು ವಹಿಸಬೇಕೆಂದು ಹೇಳಿದ್ದೀರಿ ಅದನ್ನು ತಾತ್ವಿಕವಾಗಿ ಒಪ್ಪಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ಆಡಳಿತ ಪಕ್ಷದವರು, ವಿರೋಧ ಪಕ್ಷದವರು ಪಕ್ಷೇತರರು ಎನ್ನತಕ್ಕ ಭೇದಭಾವವಿಲ್ಲದೆ ಎಲ್ಲರೂ ಒಕ್ಕೊರೆಲಿ ನಿಂದ ನ್ಯಾಯಬೆಲೆ ಅಂಗಡಿಗಳನ್ನು ಸಹಕಾರಿ ಸಂಘಗಳಿಗೆ ಒಪ್ಪಿಸಬೇಕೆಂದು ಹೇಳಿದ್ದಾರೆ. ಆದ್ದರಿಂದ ಹಂತ ಹಂತವಾಗಿ ಮುಂದೆ ಆ ರೀತಿ ಸಹಕಾರಿ ಸಂಘಗಳಿಗೆ ನೀಡುತ್ತೇವೆಂದು ಏನು ಸಚಿವರು ಹೇಳಿದ್ದಾರೆ. ಅದು ಸಾಧ್ಯವಿಲ್ಲ, ತಕ್ಷಣದಿಂದಲೇ ಈಗಿನ ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕು. ನ್ಯಾಯಬೆಲೆಯ ಅಂಗಡಿಗಳು ನಿಜವಾಗಿಯೂ ನ್ಯಾಯವಾಗಿಲ್ಲ. ಅನ್ಯಾಯದ ದ್ಯೋತಕಗಳಾಗಿವೆ.

ಶ್ರೀ ಬಿ. ಆರ್. ಯಾವಗಲ್ :- ಮಾನ್ಯ ಅಧ್ಯಕ್ಷರೆ, ಮಾನ್ಯ ಮಾಟಾಳ್ ನಾಗರಾಜ್ ಹಾಗೂ ಇತರೆ ಹಿರಿಯ ಸದಸ್ಯರುಗಳು ಹೇಳಿರುವುದು ಸತ್ಯವಾಗಿದೆ. ಖಾಸಗಿ ನ್ಯಾಯಬೆಲೆ ಅಂಗಡಿಗಳ ಮೂಲಕ ನ್ಯಾಯಯುತವಾಗಿ ಪದಾರ್ಥಗಳು ದೊರಕುತ್ತಿಲ್ಲ. ಆದ್ದರಿಂದ ಇದಕ್ಕೆ ಪರ್ಯಾಯವಾಗಿ ಸಹಕಾರಿ ವ್ಯವಸ್ಥೆಯ ಮೂಲಕ ಪಡಿತರ ಪದಾರ್ಥಗಳನ್ನು ವಿತರಣೆ ಮಾಡುವ ಪದ್ಧತಿ ಜಾರಿಗೆ ತರಬೇಕು. ಇದರಿಂದ ಕೊನೆಯಪಕ್ಷ ಆರವತ್ತು ಪರ್ ಸೆಂಟ್ ಬಡವರಿಗಾದರೂ ಪಡಿತರ ಪದಾರ್ಥಗಳು ಲಭ್ಯವಾಗುತ್ತದೆ. ಸರ್ಕಾರ ದಯಮಾಡಿ ಇದನ್ನು ಒಪ್ಪಿಕೊಳ್ಳಬೇಕು.

ಶ್ರೀ ಎಂ. ಶ್ರೀನಿವಾಸ್ :- ಮಾನ್ಯ ಅಧ್ಯಕ್ಷರೆ, ತಾವು ಹೇಳಿರತಕ್ಕದ್ದು ಸತ್ಯವಾದುದು. ಖಾಸಗಿಯವರಿಗೆ ನ್ಯಾಯಬೆಲೆ ಅಂಗಡಿಗಳನ್ನು ಕೊಡುವ ಬದಲಾಗಿ ಸಹಕಾರಿ ಸಂಘಗಳಿಗೆ ವಹಿಸಬೇಕು.

10-40 ಎ. ಎಂ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ :- ಮಾನ್ಯ ಅಧ್ಯಕ್ಷರೆ, ಈ ಪಡಿತರ ವ್ಯವಸ್ಥೆಯನ್ನು ಪ್ರತಿ ಗ್ರಾಮಗಳಿಗೆ ತಲುಪಿಸತಕ್ಕ ವ್ಯವಸ್ಥೆಯಾಗಬೇಕು. ಇಲ್ಲದಿದ್ದರೆ ಕೆಲವು ಸೊಸೈಟಿಯವರು ಏನು ಮಾಡುತ್ತಾರೆ ಅಂದರೆ, ಅದು ಲಾಭದಾಯಕವಲ್ಲ ಎಂಬ ಉದ್ದೇಶದಿಂದ ವಿತರಣೆ ಮಾಡುವುದಕ್ಕೆ ಕೆಲವು ಕಡೆ ಅವರು ಒಪ್ಪುವುದಿಲ್ಲ. ಹಳ್ಳಿಯ ಜನರು ಅವರ ಗ್ರಾಮದಲ್ಲಿ ಪಡಿತರ ಅಂಗಡಿ ಇಲ್ಲದೇ ಬೇರೆ ಯಾವುದೋ ದೂರದ ಗ್ರಾಮಕ್ಕೆ ಹೋಗಿ ಪಡಿತರ ಖರೀದಿ ಮಾಡಬೇಕಾಗಿದೆ.

ಶ್ರೀ ಅರಗ ಜ್ಞಾನೇಂದ್ರ :- ಮೊದಲನೆಯದಾಗಿ ಮಲೆನಾಡಿಗೆ ತಾವು ನಾರ್ಮ್ಸ್ ಏನು ಇಟ್ಟಿದ್ದೀರಿ, ಅದನ್ನು ಸಡಿಲಿಸಬೇಕು.

ಅಧ್ಯಕ್ಷರು :- ಅದು ಈ ಪ್ರಶ್ನೆಗೆ ಸಂಬಂಧಿಸಿಲ್ಲ ಅದು ಬೇರೆಯೇ ಪ್ರಶ್ನೆ ಆಗುತ್ತದೆ. We are just discussing the policy matter.

ಶ್ರೀ ಅರಗ ಜ್ಞಾನೇಂದ್ರ :- ಮಾನ್ಯ ಅಧ್ಯಕ್ಷರೆ, ಸರ್ಕಾರದವರು ಎಷ್ಟು ಗುರಿಯನ್ನು ಇಟ್ಟಿದ್ದಾರೋ, ಅಷ್ಟು ಹಸಿರು ಕಾರ್ಡ್‌ಗಳನ್ನು ಮಾತ್ರ ಹಂಚಲಾಗಿದೆ. ಕುಟುಂಬಕ್ಕೆ ಇಂತಿಷ್ಟು ಹಸಿರು ಕಾರ್ಡು ಎಂದು ನೀವು ಹಂಚಬೇಕು. ನನ್ನ ಕ್ಷೇತ್ರದಲ್ಲಿ ಈ ಅನ್ಯಾಯ ಬೆಲೆ ಅಂಗಡಿಗಳು ಬಹಳಷ್ಟು ಇವೆ. ಇವುಗಳನ್ನು ನ್ಯಾಯ ಬೆಲೆ ಅಂಗಡಿಗಳೆಂದು ಹೇಳುವುದಕ್ಕಾಗುವುದಿಲ್ಲ, ನಿಮ್ಮ ಇಲಾಖೆಯ ವತಿಯಿಂದ ಸರ್ವೆ ಮಾಡಿದ್ದೀರಿ, ರೆವಿನ್ಯೂ ಇಲಾಖೆಯಲ್ಲಿ ಕೂಡ ಸರ್ವೇ ಮಾಡಿದ್ದಾರೆ, ಎಷ್ಟು ಜನ ಬಡವರು ಬರುತ್ತಾರೋ ಅಷ್ಟೂ ಜನಕ್ಕೆ ಹಸಿರು ಕಾರ್ಡ್‌ಗಳನ್ನು ಹಂಚುವಂತಹ ವ್ಯವಸ್ಥೆಯಾಗಬೇಕು.

ಶ್ರೀ ಬಿ. ಬಿ. ಶಿವಪ್ಪ :- ನ್ಯಾಯ ಬೆಲೆ ಅಂಗಡಿಗಳನ್ನು ಖಾಸಗಿ ವ್ಯಕ್ತಿಗಳಿಗೆ ಕೊಡಲಿಕ್ಕೆ ಸರ್ಕಾರಕ್ಕೆ ಒಂದು ತೊಂದರೆ ಇದೆ. ಮಂತ್ರಿಗಳು ಅದನ್ನು ಹೇಳಲಿಕ್ಕೆ